# ಆರೋಗ್ಯಕ್ಕೆ ಮಾರಕ; ಔರಮೈನ್ ರಾಸಾಯನಿಕ

**ಔರಮೈನ್ ಎಂಬ ರಾಸಾಯನಿಕ ಪುಡಿಯನ್ನು ಬಳಸಿ ಅಂಗಳ ಸಾರಿಸುವುದು ಹಳ್ಳಿಗಳಲ್ಲಿ ಸಾಮಾನ್ಯ. ಈ ರಾಸಾಯನಿಕ ವಿಷಯುಕ್ತವಾಗಿದ್ದು, ಹೊಟ್ಟೆನೋವು, ವಾಂತಿ ಭೇದಿ, ಉಸಿರಾಟದ ತೊಂದರೆ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳನ್ನು ತರುತ್ತವೆ.**

**■ ಡಾ. ಗಿರಿಧರ ರಾವ್ ಹವಲ್ದಾರ್**

ಹಬ್ಬಗಳು ಬಂತೆಂದರೆ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಅಂಗಳವನ್ನು ಸಿಂಗರಿಸುವುದು ಸಾಮಾನ್ಯ. ಹಸುವಿನ ಸಗಣಿಯಿಂದ ಅಂಗಳವನ್ನು ಸಾರಿಸಿ, ವಿವಿಧ ಬಗೆಯ ರಂಗೋಲಿಗಳನ್ನು ಹಾಕಿ ಸಂಭ್ರಮಿಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಮಣ್ಣಿನ ನೆಲ ಸಾರಿಸಲು ಕೂಡ ಸಗಣಿಯನ್ನು ಬಳಸುತ್ತಾರೆ. ಮನೆಯ ಅಂಗಳ, ದೇವಸ್ಥಾನದ ಪ್ರಾಂಗಣ ಇತ್ಯಾದಿಗಳ ಸಾರಣೆಗೆ ಸಗಣಿ ಬಹಳ ಹಿಂದಿನಿಂದಲೂ ಬಳಕೆ ಆಗುತ್ತಿದೆ.

ಸಗಣಿಯ ಕುರಿತಾಗಿ ಅನೇಕ ಸಾಂಪ್ರದಾಯಿಕ ನಂಬಿಕೆಗಳು ಈಗಲೂ ನಮ್ಮ ಸಮಾಜದಲ್ಲಿ ಜೀವಂತವಾಗಿವೆ. ಮುಖ್ಯವಾಗಿ ಸೂಕ್ಷ್ಮಾಣು ಜೀವಿಗಳ ಜೈವಿಕ ಕ್ರಿಯೆಗೆ ಒಳಗಾಗಿ ಕೊಳೆತ ಸಗಣಿಯು ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಗೊಬ್ಬರವಾಗಿ ಕೃಷಿಯಲ್ಲಿ ಬಳಕೆಯಾಗುತ್ತಿದೆ.

ಈಗ ಈ ಸಗಣಿಯ ಬದಲಾಗಿ ಸಾಣಿ ಪುಡಿ ಎಂಬ ಹೆಸರಿನ ಹಳದಿ ಮತ್ತು ಹಸಿರು ಬಣ್ಣದ ಎರಡು ಕೃತಕ ರಾಸಾಯನಿಕಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮಣ್ಣಿನ ನೆಲ ಸಾರಿಸಲು, ಅಂಗಳ ಸಾರಿಸಲು ಬಳಸಲಾಗುತ್ತಿದೆ. ಈ ರಾಸಾಯನಿಕಗಳಲ್ಲಿ ಹಳದಿ ಬಣ್ಣದ ಪುಡಿಯು ಔರಮೈನ್ (Auramine) ಎಂಬ ತೀವ್ರ ವಿಷಯುಕ್ತ ರಾಸಾಯನಿಕವಾಗಿದ್ದು ಹಸಿರು ಬಣ್ಣದ ಪುಡಿಯು ಮಲಾಕೈಟ್ ಗ್ರೀನ್ (Malachite Green) ಎಂಬ ಹಾನಿಕಾರಕ ರಾಸಾಯನಿಕವಾಗಿದೆ. ಈ ರಾಸಾಯನಿಕಗಳು ಪ್ರಮುಖವಾಗಿ ಬಟ್ಟೆಗೆ ಬಣ್ಣ ಹಾಕುವ ಹಾಗೂ ಇತರೆ ಕಾರ್ಖಾನೆಗಳಲ್ಲಿ ಬಳಕೆಯಾಗುತ್ತವೆ.

ಈ ಎರಡು ರಾಸಾಯನಿಕಗಳು ಕಡಿಮೆ ಬೆಲೆಗೆ ಸುಲಭವಾಗಿ ದೊರೆಯುವುದರಿಂದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದ ಜನರು ಅಂಗಳವನ್ನು ಸಾರಿಸಿ ಸಿಂಗರಿಸಲು ಸಗಣಿಯ ಬದಲಾಗಿ ಇವುಗಳನ್ನು ಬಳಸುತ್ತಿದ್ದಾರೆ. ಶುದ್ಧ ಸಗಣಿಯ ಕೊರತೆ ಅಥವಾ ದಿನಸಿ ಅಂಗಡಿಗಳಲ್ಲಿ ಕೇವಲ ಐದು ರೂಪಾಯಿಗೆ ದೊರೆಯುವ ಈ ರಾಸಾಯನಿಕಗಳು ಬಳಸಲು ಸುಲಭ ಎಂಬುದು ಇದಕ್ಕೆ ಕಾರಣವಾಗಿರಬಹುದು.

ಔರಮೈನ್ ರಾಸಾಯನಿಕವನ್ನು ಚರ್ಮ ಮತ್ತು ಸೆಣಬು ಹದಗೊಳಿಸುವ, ಹತ್ತಿ ಮತ್ತು ಬಟ್ಟೆಗೆ ಬಣ್ಣ ಹಾಕುವ, ಇಂಕಿಂಗ್ ರಿಬ್ಬನ್‌ಗಳು, ಬಾಲ್ ಪಾಯಿಂಟ್ ಪೇಸ್ಟ್‌ಗಳು, ತೈಲಗಳು, ಮೇಣಗಳು ಮತ್ತು ಕಾರ್ಬನ್ ಪೇಪರ್‌ಗಳಲ್ಲಿ ಡೈ ಘಟಕಗಳಾಗಿ ಬಳಸಲಾಗುತ್ತದೆ. ಮಲಾಕೈಟ್ ಗ್ರೀನ್ ಎಂಬುದು ರೇಷ್ಮೆ, ಉಣ್ಣೆ, ಸೆಣಬು, ಚರ್ಮ, ಹತ್ತಿ, ಕಾಗದ, ಔಷಧಿ ಮತ್ತಿತರ ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಬಳಸಲಾಗುವ ರಾಸಾಯನಿಕವಾಗಿದೆ. ಅಪಾಯಗಳ ಕಾರಣದಿಂದಾಗಿ ಔರಮೈನ್ ಮತ್ತು ಮಲಾಕೈಟ್ ಈ ಎರಡೂ ರಾಸಾಯನಿಕಗಳು ಸಂಶೋಧನೆಗಳಲ್ಲಿ ಹೆಚ್ಚು ವಿವಾದಾತ್ಮಕ ಸಂಯುಕ್ತಗಳಾಗಿವೆ.

ಹಳ್ಳಿಗಳಲ್ಲಿ ಸಾರಿಸಿದ ಅಂಗಳದ ದೂಳು ಹಾರಿ ನೀರು ಮತ್ತು ಆಹಾರ ಪದಾರ್ಥಗಳಲ್ಲಿ ಸೇರಿಕೊಳ್ಳುವುದು, ಚಿಕ್ಕ ಮಕ್ಕಳು ನೆಲವನ್ನು ಮುಟ್ಟಿದ ತಮ್ಮ ಕೈ ಬೆರಳುಗಳನ್ನು ಬಾಯಲ್ಲಿಟ್ಟುಕೊಳ್ಳುವುದು ತೀರಾ ಸಾಮಾನ್ಯ. ಈ ವಿಷ ವಸ್ತುಗಳ ಸಂಪರ್ಕದಿಂದ ಚರ್ಮದ ತೊಂದರೆ, ವಾಂತಿ, ಭೇದಿ, ಹೊಟ್ಟೆನೋವು, ಉಸಿರಾಟದ ತೊಂದರೆ, ಕುರುಡುತನ ಇತ್ಯಾದಿ ಆರೋಗ್ಯದ ತೊಂದರೆಗಳು ಬರುವ ಸಾಧ್ಯತೆ ಇದೆ.

ಈ ಔರಮೈನ್ ರಾಸಾಯನಿಕವು ಯಾವುದೇ ರೀತಿಯಿಂದ ಜೀವಿಗಳ ದೇಹವನ್ನು ಪ್ರವೇಶಿಸಿದರೂ ದೇಹದ ನರಮಂಡಲದ ಮೇಲೆ ತೀವ್ರವಾದ ವಿಷದ ಪರಿಣಾಮವನ್ನು ಬೀರುತ್ತಿದ್ದು ಕೆಲವೊಮ್ಮೆ ಕ್ಯಾನ್ಸರ್ ರೋಗಕ್ಕೂ ಕಾರಣವಾಗಬಹುದು ಎಂಬುದು ವಿವಿಧ ಅಧ್ಯಯನಗಳಿಂದ ತಿಳಿದು ಬಂದಿದೆ.

ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ತಮಿಳುನಾಡಿನ ಕೊಯಮತ್ತೂರ್, ಈರೋಡ್ ಮತ್ತು ತಿರುಪೂರ್ ಜಿಲ್ಲೆಗಳಲ್ಲಿ ಈ ಸಾಣಿ ಪುಡಿಯನ್ನು ಹೆಚ್ಚಾಗಿ ಬಳಸಲಾಗುತ್ತಿದ್ದು, ಕೆಲವೊಮ್ಮೆ ಆತ್ಮಹತ್ಯೆಗಾಗಿ (ಸ್ವಹತ್ಯೆ) ಈ ಪುಡಿಯನ್ನು ಬಳಸಲಾಗಿದೆ ಎಂಬುದು ತಮಿಳುನಾಡಿನ ವೈದ್ಯಕೀಯ ಇಲಾಖೆ ನೀಡಿದ ಮಾಹಿತಿ. ಈ ಸಾಣಿ ಪುಡಿಯನ್ನು ಬಳಸಿ ಸ್ವಹತ್ಯೆ ಮಾಡಿಕೊಂಡವರ ಸಂಖ್ಯೆ ಹೆಚ್ಚುತ್ತಿದ್ದುದರಿಂದ 2007ರಲ್ಲಿಯೇ ತಮಿಳುನಾಡಿನಲ್ಲಿ ಈ ಸಾಣಿ ಪುಡಿಯ ಮಾರಾಟವನ್ನು ನಿಷೇಧಿಸಲಾಗಿದೆ. ಪೊಲೀಸ್ ಇಲಾಖೆಯು ಮಾರುವವರನ್ನು ಬಂಧಿಸಿದೆ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಂಡಿದೆ.

ಕರ್ನಾಟಕದಲ್ಲೂ ಕೂಡ ಕೆಲವು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಈ ಸಗಣಿ ಪುಡಿಯನ್ನು ಮಾರುವುದು ಮತ್ತು ಬಳಸುವುದು ಹೆಚ್ಚಾಗುತ್ತಿದೆ. ಈ ಎರಡು ರಾಸಾಯನಿಕಗಳು ಬಹಳಷ್ಟು ಸುಲಭವಾಗಿ ಜನರಿಗೆ ಗ್ರಂಧಿಗೆ ಅಂಗಡಿಗಳಲ್ಲಿ ಹಾಗೂ ಕೆಲವೊಮ್ಮೆ ಕಿರಾಣಿ ಅಂಗಡಿಗಳಲ್ಲೂ ದೊರೆಯುತ್ತವೆ. ತಮಿಳುನಾಡಿನಲ್ಲಿ ಕ್ರಮ ಕೈಗೊಂಡಿರುವಂತೆ ಇಲ್ಲಿಯೂ ಈ ಅಪಾಯಕಾರಿ ರಾಸಾಯನಿಕಗಳ ಮಾರಾಟವನ್ನು ನಿಲ್ಲಿಸಬೇಕಿದೆ. ಏಕೆಂದರೆ ಅಂಗಳದ ಅಂದ ಆರೋಗ್ಯಕ್ಕೆ ಅಪಾಯಕಾರಿಯಾಗಬಾರದಲ್ಲವೇ?

(ಲೇಖಕರು ವೃತ್ತಿನಿರತ ಆಪ್ತ ಸಮಾಲೋಚಕರು ಹಾಗೂ ಮನೋಚಿಕಿತ್ಸಕರು)

